ಹೇಳುತ್ತಿದ್ದಾರೆ. ಅದರ ಬಗ್ಗೆ ಮಾನ್ಯ ಸದಸ್ಯರ ಹತ್ತಿರ ಏನಾದರೂ ಪುರಾವೆಗಳು ಇದ್ದು ಅದನ್ನು ನಮಗೆ ಕೊಟ್ಟರೆ ಅದರ ಬಗ್ಗೆ ತನಿಖೆ ಮಾಡಬಹುದೇ ಹೊರತಾಗಿ ಬೇರೆ ಮಾಹಿತಿ ನಮ್ಮಲ್ಲಿಲ್ಲ.

ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರ ನೇಮಕಾತಿ

೧೬೮೮ (೬೯೨) ಶ್ರೀ ಎನ್. ಹೆಚ್. ಗೌಡ (ಕುಮಟ). —ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ. —

ಅ) ಕರ್ನಾಟಕದಲ್ಲಿರುವ ಎಷ್ಟು ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಣ ಅಧ್ಯಾಪಕರಿದ್ದಾರೆ ?

ಆ) ಉಳಿದ ಶಾಲೆಗಳಿಗೂ ಆ ಶಿಕ್ಷಕರನ್ನು ನಿಯಮಿಸುವ ವಿಚಾರವೇನಾದರೂ ಸರ್ಕಾರಕ್ಕೆ ಇದೆಯೇ ?

ಇ) ಇದ್ದರೆ ಎಂದಿನಿಂದ ನಿಯಮಿಸಲು ಕ್ರಮ ಕೈಗೊಳ್ಳಲಾಗುವುದು ?

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಶಿಕ್ಷಣ ರಾಜ್ಯ ಮಂತ್ರಿಗಳು). —

ಅ) ೧೩೭೮.

ಆ) ೧ ರಿಂದ ೭ ತರಗತಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ ಜನ ಉಪಾಧ್ಯಾಯರಿದ್ದು ೭ನೇ ಉಪಾಧ್ಯಾಯರನ್ನು ನೇಮಿಸುವ ಅವಶ್ಯಕತೆ ಬಂದಾಗ ದೈಹಿಕ ಶಿಕ್ಷಣ ತರಬೇತಿ ಪಡೆದ ಅಧ್ಯಾಪಕರನ್ನು ನೇಮಿಸಬೇಕೆಂದು ನಿರ್ದೇಶನವಿದೆ. ಆ ಪ್ರಕಾರ ಸಂಬಂಧಿಸಿದ ಜಿಲ್ಲಾ ಪರಿಷತ್ತುಗಳು ಕ್ರಮ ಕೈಗೊಳ್ಳಬಹುದು.

ಇ) ಉದ್ಭವಿಸುವುದಿಲ್ಲ.

ಶ್ರೀ ಎನ್. ಹೆಚ್. ಗೌಡ. —ಕರ್ನಾಟಕ ರಾಜ್ಯದಲ್ಲಿ ಒಟ್ಟು ೧೩೭೮ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರು ಇದ್ದಾರೆಂದು ಉತ್ತರ ಕೊಟ್ಟಿರುವುದನ್ನು ನೋಡಿ ನನಗೆ ತುಂಬ ಆಶ್ಚರ್ಯವಾಗುತ್ತಿದೆ. ನಾನೊಂದು ಪ್ರಶ್ನೆಯನ್ನು ಮಾನ್ಯ ಸಚಿವೆಯವರಿಗೆ ಕೇಳುತ್ತಿದ್ದೇನೆ. ಕರ್ನಾಟಕ ರಾಜ್ಯದಲ್ಲಿ ಎಷ್ಟು ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರು ಇದ್ದಾರೆ ಎಂಬುದನ್ನು ತಿಳಿಸಬೇಕು.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್. —ರಾಜ್ಯದಲ್ಲಿ ಒಟ್ಟು ೧೨೩೪೧ ಪೂರ್ಣ ಪ್ರಮಾಣದ ಹಿರಿಯ ಪ್ರಾಥಮಿಕ ಶಾಲೆಗಳಿದ್ದು, ಅವುಗಳಲ್ಲಿ ೧೩೭೮ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ದೈಹಿಕ ಶಿಕ್ಷಕರನ್ನು ನೇಮಿಸಲಾಗಿದೆ. ಇನ್ನುಳಿದ ಹಿರಿಯ ಪ್ರಾಥಮಿಕ ಶಾಲೆಗಳಿಗೆ ಶಾರೀರಿಕ ಶಿಕ್ಷಕರನ್ನು ನೇಮಿಸುವ ವಿಚಾರ ಸರ್ಕಾರದ ಪರಿಶೀಲನಾ ಹಂತದಲ್ಲಿದೆ. ೧ ರಿಂದ ೭ನೇ ತರಗತಿಯವರೆಗೆ ಸಾಮಾನ್ಯವಾಗಿ ೬ ಶಿಕ್ಷಕರನ್ನು ನೇಮಿಸಲಾಗಿದೆ. ೭ನೇ ಉಪಾಧ್ಯಾಯರನ್ನು ನೇಮಿಸುವಾಗ ಕಡ್ಡಾಯವಾಗಿ ಸಿ.ಪಿ ಎಡ್. ಆದಂತಹವರನ್ನೇ ದೈಹಿಕ ಶಿಕ್ಷಕರನ್ನಾಗಿ ನೇಮಿಸಬೇಕೆಂಬುದಾಗಿ ಸರ್ಕಾರದಿಂದ ಜಿಲ್ಲಾ ಪರಿಷತ್ತುಗಳಿಗೆ ಆದೇಶ ಹೋಗಿದೆ.

ಶ್ರೀ ಎನ್. ಹೆಚ್. ಗೌಡ —ಕರ್ನಾಟಕ ರಾಜ್ಯದಲ್ಲಿ ೧೨ ಸಾವಿರಕ್ಕಿಂತ ಹೆಚ್ಚು ಪೂರ್ಣ ಪ್ರಾಥಮಿಕ ಶಾಲೆಗಳಿದ್ದು ಅವುಗಳಲ್ಲಿ ಕೇವಲ ೧೩೭೮ ಶಾಲೆಗಳಲ್ಲಿ ಮಾತ್ರ ಶಾರೀರಿಕ ಶಿಕ್ಷಕರು ಇರುವುದನ್ನು ನೋಡಿದರೆ ನಿಜವಾಗಿಯೂ ಇದು ಕಳವಳಕಾರಿಯಾದ ಸಂಗತಿ. ಏಕೆಂದರೆ ಎಲ್ಲ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರ ಅಗತ್ಯ ಇದೆ. ೭ನೇ ವಯಸ್ಸಿನಿಂದ ಮಕ್ಕಳು ಶಾಲೆಗೆ ಹೋಗುತ್ತಾರೆ. ೬ ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳು ಕಿರಿಯ ಪ್ರಾಥಮಿಕ ಶಾಲೆಗೆ ಹೋಗುತ್ತಾರೆ. ಹಿರಿಯ ಪ್ರಾಥಮಿಕ ಶಾಲೆಗೆ ಹೋಗುವ ಮಕ್ಕಳಿಗೆ ಹೆಚ್ಚು ವಯಸ್ಸು ಆಗಿರುತ್ತದೆ. ಆಂತಹ ಮಕ್ಕಳಿಗೆ ೫ನೇ ತರಗತಿಯಲ್ಲಾದರೂ ಶಾರೀರಕ ಶಿಕ್ಷಣವನ್ನು ಕೋಡದೆ ಹೋದರೆ ಬುದ್ಧಿ ಬೆಳವಣಿಗೆಯಾಗುವುದಿಲ್ಲ ಅವರ ಮನಸ್ಸಿನ ಬೆಳವಣಿಗೆಯಾಗುವುದಿಲ್ಲ. ಆದ್ದರಿಂದ ಆ ಮಕ್ಕಳಿಗೆ ಬುದ್ಧಿ ಮತ್ತು ಮನಸ್ಸಿನ ಬೆಳವಣಿಗೆಯಾಗಬೇಕಾದರೆ ಶಾರೀರಿಕ ಬೆಳವಣಿಗೆ ಚೆನ್ನಾಗಿ ಆಗಬೇಕು. ನನ್ನ ಎರಡನೇ ಪ್ರಶ್ನೆಗೆ

ರಿಂದ ೭ನೇ ತರಗತಿಗಳಿರುವ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ಜನ ಉಪಾಧ್ಯಾಯರಿದ್ದು ೭ನೇ ಉಪಾಧ್ಯಾಯರನ್ನು ನೇಮಿಸುವ ಅವಶ್ಯಕತೆ ಬಂದಾಗ ದೈಹಿಕ ಶಿಕ್ಷಣ ತರಬೇತಿ ಪಡೆದ ಅಧ್ಯಾಪಕರನ್ನು ನೇಮಿಸಬೇಕೆಂದು ನಿರ್ದೇಶನವಿದೆ ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಯಾರಿಗೆ ಹೇಳಿದ್ದಾರೆ ? ಜಿಲ್ಲಾಪರಿಷತ್ತಿನವರಿಗೆ ಹೇಳಿದ್ದಾರೆ. ಇವತ್ತು ಎಲ್ಲಾ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ೬ಜನ ಅಧ್ಯಾಪಕರು ಇಲ್ಲ. ಮೂರು ಜನ ಅಥವಾ ಇಬ್ಬರು ಜನರು ಇದ್ದಾರೆ. ಅಂತಹ ಪೂರ್ಣ ಪ್ರಾಥಮಿಕ ಶಾಲೆಗಳ ಗತಿ ಏನು ? ಆದುದರಿಂದ ಅಧ್ಯಕ್ಷರ ಮುಖಾಂತರ ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ದೈಹಿಕ ಶಿಕ್ಷಣ ಎಲ್ಲಾ ಮಕ್ಕಳಿಗೂ ಅತ್ಯಗತ್ಯವಿರುವುದರಿಂದ ಎಲ್ಲಾ ಪೂರ್ಣ ಪ್ರಾಥಮಿಕ ಶಾಲೆಗಳಲ್ಲಿ ೬ ಜನ ಉಪಾಧ್ಯಾಯರ ಲೆಕ್ಕವನ್ನು ತೆಗೆದುಕೊಳ್ಳದೇ ಪ್ರತಿಯೊಂದು ಶಾಲೆಗೆ ಒಬ್ಬಬ್ಬ ಶಾರೀರಿಕ ಶಿಕ್ಷಕರನ್ನು ನೇಮಿಸುವುದು ಅತ್ಯಗತ್ಯ ಏಕೆಂದರೆ ಇವತ್ತು ಶಾರೀರಿಕ ಶಿಕ್ಷಣದಲ್ಲಿ ತರಬೇತಿ ಪಡೆದವರ ಕೊರತೆ ಇಲ್ಲ. ಅನೇಕ ಜನ ಪಿಟಿಎಡ್ ಮುಗಿಸಿಕೊಂಡು ನಿರುದ್ಯೋಗದಿಂದ ಬಳಲುತ್ತಿದ್ದಾರೆ ಇಂತಹವರಿಗೆ ಉದ್ಯೋಗ ದೊರಕುತ್ತದೆ. ಹಾಗೂ ನಮ್ಮ ಮಕ್ಕಳಿಗೂ ಶಾರೀರಿಕ ಶಿಕ್ಷಣ ದೊರಕುತ್ತದೆ ಮತ್ತು ಮುಂದಿನ ವಿದ್ಯಾಭ್ಯಾಸಕ್ಕೆ ಅನುಕೂಲವಾಗುತ್ತದೆ. ಮನುಷ್ಯನ ಬದುಕಿನ ಎಲ್ಲಾ ರಪ್ಯರಂಗಸ್ಥಳಗಳಲ್ಲಿ ಈ ಶಿಕ್ಷಣರಂಗ ಅತ್ಯಂತ ಪ್ರಾಮುಖ್ಯವಾಗಿರುವುದರಿಂದ ಈ ರಂಗ ಎಲ್ಲ ದೃಷ್ಟಿಯಿಂದ ಪ್ರಗತಿಯೊಂದಬೇಕು. ಇದು ಪ್ರಗತಿಯಾಗದೆ ಇದ್ದರೆ ಮುಂದಿನ ಬದುಕಿನಲ್ಲಿ ಪ್ರಗತಿ ಯಾಗುವುದು ಅಸಾಧ್ಯ. ಆದ್ದರಿಂದ ಎಲ್ಲ ಶಾಲೆಗಳಲ್ಲಿ ಶಾರೀರಿಕ ಶಿಕ್ಷಕರನ್ನು ನೇಮಿಸಬೇಕೆಂಬ ಆಜ್ಞೆ ಹೊರಡಿಸಬೇಕೆಂದು ಹೇಳುತ್ತೇನೆ.

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಅಧ್ಯಕ್ಷರೇ, ಇದರ ಬಗ್ಗೆ ಸಂಪೂರ್ಣವಾಗಿ ಪ್ರಯತ್ನ ಮಾಡಿ ಜಿಲ್ಲಾಪರಿಷತ್ತುಗಳಿಗೆ ನಿರ್ದಿಷ್ಟವಾದ ಒಂದು ಅಭಿಪ್ರಾಯವನ್ನು ಕೊಟ್ಟು ಶಾರೀರಿಕ ಶಿಕ್ಷಕರನ್ನು ನೇಮಕಾತಿ ಮಾಡಿಕೊಳ್ಳುವುದಕ್ಕೆ ಆದೇಶವನ್ನು ನೀಡುತ್ತೇವೆ.

ರಾಜ್ಯದಲ್ಲಿ ಗ್ರಂಥಾಲಯಗಳಿಗೆ ಕಟ್ಟಡಗಳು

೧೬೯(೭೨೭) ಶ್ರೀಮತಿ ಸುಮಾ ವಸಂತ(ವೀರಾಜಪೇಟೆ).—ಮಾನ್ಯ ಶಿಕ್ಷಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ರಾಜ್ಯದಲ್ಲಿರುವ ಜಿಲ್ಲಾ ಗ್ರಂಥಾಲಯಗಳಿಗೆ ಪ್ರತಿ ವರ್ಷ ಬಿಡುಗಡೆ ಮಾಡುತ್ತಿರುವ ಹಣವೆಷ್ಟು? (ಜಿಲ್ಲಾವಾರು ವಿವರ ನೀಡುವುದು)

ಆ) ರಾಜ್ಯದಲ್ಲಿ ಅನೇಕ ಗ್ರಂಥಾಲಯಗಳಿಗೆ ಸ್ವಂತ ಕಟ್ಟಡವಿಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೆ, ?

ಇ) ಹಾಗಿದ್ದಲ್ಲಿ ಈ ಬಗ್ಗೆ ಸರ್ಕಾರದವರು ಕೈಗೊಳ್ಳುತ್ತಿರುವ ಕ್ರಮಗಳೇನು ?

ಶ್ರೀ ಎಂ. ಚಂದ್ರಶೇಖರ್ (ಶಿಕ್ಷಣ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ಜಿಲ್ಲಾ ಗ್ರಂಥಾಲಯಗಳಿಗೆ ೧೯೮೭–೮೮ ರಲ್ಲಿ ಯೋಜನೆ ಮತ್ತು ಯೋಜನೇತರ ಲೆಕ್ಕ ಶೀರ್ಷಿಕೆಯಲ್ಲಿ ೧೨೬.೦೩ಲಕ್ಷ ರೂ.ಗಳನ್ನು ಮತ್ತು ಜಿಲ್ಲೆಯ ಭೂ ಕಂದಾಯದ ಶೇಕಡ ೩ರ ಸಹಾಯಧನ ೧೬.೭೪ ಲಕ್ಷ ರೂ ಗಳನ್ನು ಒಟ್ಟು ೧೪೨.೭೭ ಲಕ್ಷ ರೂ.ಗಳನ್ನು ಮಂಜೂರು ಮಾಡಲಾಗುತ್ತಿದೆ. (೧೯೮೭–೮೮ನೇ ಸಾಲಿನ ಮಾಹಿತಿಯಂತೆ ಜಿಲ್ಲಾವಾರು ಮಾಹಿತಿಯ ಪಟ್ಟಿಯನ್ನು ಲಗತ್ತಿಸಿದೆ.)

ಆ) ಹೌದು.

ಇ) ಪ್ರತಿ ವರ್ಷ ಯೋಜನೆ ಅಡಿಯಲ್ಲಿ ಲಭ್ಯವಿರುವ ಆಯವ್ಯಯವನ್ನು ಗಮನದಲ್ಲಿರಿಸಿ ಕೊಂಡು ಗ್ರಂಥಾಲಯ ಕಟ್ಟಡಗಳನ್ನು ನಿರ್ಮಿಸಲು ಹಣ ಮಂಜೂರು ಮಾಡಲಾಗುತ್ತದೆ.